ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಜನರಿಗೆ ಅಂತರ ಅಂದರೆ ಏನೆಂದು ಅರ್ಥವಾಗುವುದು ಯಾವಾಗ?



ಸೋರುಮೂಗು, ಜೋರುಕೆಮ್ಮಿನವರು ಎದುರು ಬಂದಾಗ.

ಎಂ.ಜಿ. ಉಮಾ, ಬಳ್ಳಾರಿ

ತಾಯಿಯ ಕೂಗು ಮಕ್ಕಳ ಹೃದಯಕ್ಕೆ ಮುಟ್ಟುವುದು ಯಾವಾಗ?

ಈಗಿನ ಮಕ್ಕಳಿಗಂತೂ 'ಮ್ಯಾಗಿ ಮಾಡಿದ್ದೀನಿ ಬನ್ರೋ' ಎಂದು ಕೂಗಿದಾಗ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಸಂಕಟ ಬಂದಾಗ ವೆಂಕಟರಮಣ; ಕೊರೊನಾ ಸಂಕಟ ಬಂದಾಗ ವೆಂಕಟರಮಣನ ದೇಗುಲವನ್ನೇ ಮುಚ್ಚಿದರಲ್ಲ?

'ಅರವತ್ತು ಮೀರಿದ್ದೀರಿ, ಯಾರ್‍ಯಾರನ್ನೋ ಒಳಗೆ ಬಿಟ್ಟುಕೊಳ್ಳಬೇಡಿ' ಎಂದು ಪದ್ಮಾವತಿ ಆದೇಶಿಸಿದಳಂತೆ.

ಸಿ. ಆನಂದಪ್ಪ, ಬೆಂಗಳೂರು

ಬಲಿ ಚಕ್ರವರ್ತಿಯು ತನ್ನ ಭೂಮಿಯನ್ನು ವಾಮನನಿಗೆ ದಾನವಾಗಿ ಕೊಟ್ಟದರ ಉದ್ದೇಶವೇನು?



ಎಸ್‌ಇಝೆಡ್‌ಗಳನ್ನು (Safely enjoyable zone) ಸ್ಥಾಪಿಸಲೆಂದು.

ಬಿ. ಚಂದ್ರೇಗೌಡ, ಬೆಂಗಳೂರು

ಮಾನಕ್ಕೂ, ಮಾನವನಿಗೂ ಏನು ಸಂಬಂಧ?

ಮಾನ ಎಂದರೆ ಅಳವು; ಅಳವಿನಲ್ಲಿ ಜೀವಿಸುವವನೇ ಮಾನವ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಹಣ, ಬಂಗಾರ, ಬೈಕ್ ಕದ್ದವನಿಗೆ ಬಂಧನ; ಹೃದಯ ಕದ್ದವನಿಗೆ ಏಕೆ ಬಂಧನವಿಲ್ಲ?

ಇದೆ. ಆಜೀವ ಖಾರಾಗೃಹ ಬಂಧನಕ್ಕೆ ಸ್ವಯಂ ಒಳಗಾಗಿರುತ್ತಾನೆ.

ಎನ್.ಕೆ. ಹೆಬ್ಬಾರ್, ಕೋಣಿ

ಮುದುಕರನ್ನು ಕಂಡರೂ ಹೆಣ್ಣುಮಕ್ಕಳು ತಲೆ ತಗ್ಗಿಸಿ ನಡೆಯುತ್ತಾರೆ. ಏಕೆ?

ಎದುರು ಯಾರು ಬಂದರೇನು, ಕೈಯಲ್ಲಿನ ಮೊಬೈಲ್ ನೋಡುತ್ತಲೇ ಸಾಗಬೇಕಲ್ಲ.

ಮೋಹನರಾಜು ಎಸ್.ಎ. ಶಂಕರಘಟ್ಟ

ಅನ್ನದಾತ, ವಿದ್ಯಾದಾತ, ಆರೋಗ್ಯದಾರ; ಈ ಮೂವರಲ್ಲಿ ಯಾರು ಹಿತವರು?

ಅನ್ನದಾತನೇ; ಅನ್ನುವಾತ ಯಾರಿಗೂ ಇಷ್ಟವಾಗುವುದಿಲ್ಲ.

ವಿ. ಮಾಧವ ಶಾನುಭಾಗ, ಕುಂದಾಪುರ

ತನ್ನ ಬಂಧಿಸಿ ದ್ರೋಣರ ಮಂಚಕ್ಕೆ ಕಟ್ಟಿದ ಅರ್ಜುನನಿಗೆ ದ್ರುಪದ ಮಗಳನ್ನು ಕೊಟ್ಟಿದ್ದು ಭಯದಿಂದಲೋ, ಶೌರ್ಯ ಮೆಚ್ಚಿಯೋ?

ವೈರಿಗೆ ಮಗಳನ್ನು ಕೊಟ್ಟು ಸೇಡು ತೀರಿಸಿಕೊಂಡ ಹಲವಾರು ಉದಾಹರಣೆಗಳು ಚರಿತ್ರೆಯಲ್ಲಿವೆ.

ಚನ್ನವೀರಪ್ಪ ಬಿದರಹಳ್ಳಿ, ಹಿರೇಹಡಗಲಿ

ಮಡಿಲೊಳಗೆ ಸುಣ್ಣ ಕಟ್ಟಿಕೊಂಡು ಮಡುವಿಗೆ ಬಿದ್ದಂತೆ. ಏನಿದರ ಅರ್ಥ?

ಈಜುವಾಗಲೂ ಸುಣ್ಣ ಹಚ್ಚಿಕೊಂಡು ಕವಳ ಜಗಿಯುವ ಚಟ ಇದೆಯೆಂದು.

ಸುಲೋಚನ ಜಿ. ರಾವ್, ಬೆಂಗಳೂರು

ಮದುವೆಮನೆಗೆ ಹೆಂಗಸರು ಮೈತುಂಬಾ ಒಡವೆ ಹೇರಿಕೊಂಡು ಹೋಗುವುದೇಕೆ?

ಬಹಳ ಕಣ್ಣುಗಳು ಅವುಗಳ ಮೇಲಿರುತ್ತವಾದ್ದರಿಂದ ಕಳ್ಳತನದ ಭಯವಿಲ್ಲದೆ ತೊಡಬಹುದೆಂದು.

ಬಾ.ರಂ. ಸುರೇಶ್, ಶಿವಮೊಗ್ಗ

ಭೂಕಂಪವಿಲ್ಲದಿದ್ದರೂ ನಮ್ಮ ಮನೆಯಲ್ಲಿ ಆಗಾಗ್ಗೆ ಪಾತ್ರೆ ಪರಡಿಗಳು ಕೆಳಗೆ ಬೀಳುತ್ತವಲ್ಲಾ...?

ಗುರುಗುರುತ್ವಾಕರ್ಷಣೆಯ ಪ್ರಭಾವ.

ಭುವನೇಶ ಕುಂಬಾರ, ಮೋಕ

ನ್ಯಾಯಾಲಯದಲ್ಲಿ ಗೆಲ್ಲುವುದೆಲ್ಲ ಸುಳ್ಳುಸಾಕ್ಷಿಯ ಮೇಲೆ ಎಂದಮೇಲೆ ನ್ಯಾಯಾಲಯಕ್ಕೆ ಅರ್ಥ?

'ಸತ್ಯಕ್ಕೇ ಜಯ' ಎನ್ನುವುದನ್ನು ಕೆಲವೊಮ್ಮೆ 'ಸತ್ಯಕ್ cage ಅಯ್ಯ' ಎಂದು ಅರಿಯಬೇಕೆಂದು.

## ಬಹುಮಾನಿತ ಪ್ರಶ್ನೆ

ಕೆ. ಸಿದ್ದಪ್ಪ, ಬೆಂಗಳೂರು

ಇಲ್ಲೊಬ್ಬಳು ಮನೆಯಲ್ಲಿ ಅನಾಚಾರ ಮಾಡಿ ಬೀದಿನಲ್ಲಿಗೆ ಸಗಣಿ ಬಳಿದು ತೊಳೆದು ನೀರು ಹಿಡಿಯುವಳಲ್ಲಾ?

ಸರಿಯೇ. ಮುಂದಿನ ಕಾರ್ಪೊರೇಟರ್ ಚುನಾವಣೆಗೆ ನಿಲ್ಲಲು ಇವೆರಡೂ ಅವಶ್ಯ ಗುಣಗಳು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ದೀನನಾಗಿ ಬಂದರೂ ದೇವರು ದಯೆ ತೋರುವುದಿಲ್ಲವಲ್ಲಾ...?

ನಾಯ್ಸ್ ಪಲ್ಯೂಷನ್ನಿನಲ್ಲಿ ನಿಮ್ಮ ಕೂಗು ಅವನಿಗೆ ಕೇಳಿಸಿಲ್ಲವಂತೆ.

ವಿ. ಹಮೀದ್, ವಿಟ್ಲ

ಕೈ ಕೆಸರಾದರೆ ಬಾಯಿ ಮೊಸರು. ಬಾಯೇ ಕೆಸರಾದರೆ?

ಕೈಗೆ ಬೇಡಿ ತೊಡಿಸಲು ಬಂದವರಿಗೆಲ್ಲ ಅಷ್ಟಿಷ್ಟು ಕೊಸರು.

ಸುಂದರ್, ಬೆಂಗಳೂರು

ಮಾರಕ, ತಾರಕ. ಪರಿಚಾರಕ ಗುಣವುಳ್ಳ ವ್ಯಕ್ತಿ ಯಾರು?



ಗಡಿ ಕಾಯುವ ಯೋಧ.

ಅಶೋಕ್, ಭಾಗಮಂಡಲ

ಗರ್ಭಗುಡಿಯಿಂದಲೇ ಕುಶಲ ವಿಚಾರಿಸುವ ಸ್ನೇಹಿತನ ಬಗ್ಗೆ ನಿಮ್ಮ ಅನಿಸಿಕೆ?

ಹೊರಬಂದು ಸೋಂಕಾಗಿ ದೇವರ ಬಳಿ ಹೋಗುವ ಬದಲು ವಿಗ್ರಹದ ಬಳಿಯೇ ಸುರಕ್ಷಿತವಾಗಿರುವ ಜಾಣ.

ಎಂ.ಎಸ್. ಸ್ವಾತಿ, ಗೌರಿಬಿದನೂರು

ಉಡುಪಿ ಹೋಟೆಲುಗಳೇಕೆ ಅಷ್ಟು ಫೇಮಸ್ಸು?

'ಸಾರ್'ಗಳು 'ಹುಳಿ'ಹುಳಿಯಾಗಿ 'ಅನ್ನ'ದಿರುವಂತೆ ಪಾಕದಲ್ಲಿ ಸಾ'ಫಲ್ಯ' ಪಡೆದಿರುವುದರಿಂದ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in